# ಬಹುತ್ವದ ಭಾರತ

ಭಾರತ ಎಂದೂ ಧಾರ್ಮಿಕವಾಗಿ ಏಕರೂಪಿಯಾಗಿರಲಿಲ್ಲ. ವೇದಕಾಲದಲ್ಲಿಯೂ ಭಿನ್ನ ಆರಾಧನಾ ಪದ್ಧತಿಗಳಿದ್ದವೆಂದು ತಿಳಿದುಬರುತ್ತದೆ. ವೇದಗಳಲ್ಲಿ ಒಂದು ಕೇಂದ್ರ ತತ್ವಚಿಂತನೆ (central canon) ಎಂಬುದಿಲ್ಲ. ಅಲ್ಲಿರುವವು ಬೇರೆಬೇರೆ ಕಾಲದಲ್ಲಿ ಬೇರೆಬೇರೆ ಋಷಿಗಳು ಸ್ವತಂತ್ರವಾಗಿ ಕಟ್ಟಿಕೊಟ್ಟ ಚಿಂತನೆಗಳು. ಆದ್ದರಿಂದ ಅಲ್ಲಿ ಒಂದೆಡೆ ಹಿಡಿದಿಟ್ಟುಕೊಳ್ಳುವ ಅಥವಾ ಹೇರಲ್ಪಡುವ ಸಾಮಾನ್ಯ ತತ್ವವಿಲ್ಲ. ತತ್ವಜ್ಞಾನಿಗಳಲ್ಲಿ ಮೊದಲಿಗ ಎನಿಸಿಕೊಳ್ಳುವ ಯಾಜ್ಞವಲ್ಕ್ಯ ಆತ್ಮವಾದದ ಪ್ರತಿಪಾದಕನಾಗಿದ್ದರೆ ಅವನ ಸಮಕಾಲೀನ ಉದ್ದಾಲಕನು ಪ್ರಕೃತಿವಾದದ ಪ್ರತಿನಿಧಿಯಾಗಿದ್ದ. ಮ್ಯಾಕ್ಸ್ ಮುಲ್ಲರ್ ಪಟ್ಟಿಮಾಡಿರುವ ಆರು ದರ್ಶನಗಳು ಕಾಲಾಂತರದಲ್ಲಿ ಮೈದಳೆದವು. ಅವುಗಳಲ್ಲಿ ಪೂರ್ವಮೀಮಾಂಸೆ ಮತ್ತು ಯೋಗವನ್ನು ಹೊರತುಪಡಿಸಿ ಉಳಿದ ಸಾಂಖ್ಯ, ನ್ಯಾಯ ಮತ್ತು ವೈಶೇಷಿಕಗಳು ದೇವರ ಅಸ್ತಿತ್ವವನ್ನು, ವೇದಗಳ ಪ್ರಶ್ನಾತೀತ ಅಧಿಕಾರವನ್ನು ವಿರೋಧಿಸಿದವು ಮತ್ತು ಭೌತವಾದವನ್ನು ಒಪ್ಪಿಕೊಂಡವು. ವೇದಾಂತವು (ಉಪನಿಷತ್ತುಗಳು) ಆದರ್ಶವಾದಿಯಾಯಿತು. 'ಓದದೆ ಅವುಗಳನ್ನು ಪೂಜೆ ಮಾಡುವವರಿಗೆ ಆತ್ಮಕ್ಕೆ ಸಂಬಂಧಿಸಿದಂತೆ ಯಾವುದೇ ಎರಡು ಉಪನಿಷತ್ತುಗಳಲ್ಲಿ ಒಮ್ಮತವಿಲ್ಲ' ಎಂದು ವಿಚಾರವಾದಿ ವಿ.ಆರ್. ನಾರ್ಲ ಹೇಳುತ್ತಾರೆ. ಹೀಗೆ ಭಾರತದಲ್ಲಿ ತತ್ವಾದರ್ಶಗಳ ಸಹಬಾಳುವೆ ನಡೆದುಕೊಂಡು ಬಂದಿದೆ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಛಾಂದೋಗ್ಯ ಉಪನಿಷತ್ತಿನಲ್ಲಿ ಬರುವ ಸತ್ಯಕಾಮ ಜಾಬಾಲ ವೃತ್ತಾಂತ. ಸತ್ಯಕಾಮನಿಗೆ ವೇದಪಾರಂಗತನಾಗಬೇಕೆಂದು ಆಸೆ ಹುಟ್ಟುತ್ತದೆ. ಅವನು ತನ್ನ ತಾಯಿಯಾದ ಜಾಬಾಲಳ ಬಳಿ ಹೋಗಿ, ನನಗೆ ವೇದಗಳನ್ನು ಕಲಿಯಬೇಕೆಂಬ ಆಸೆಯಾಗಿದೆ. ನನ್ನ ತಂದೆ ಯಾರು, ನನ್ನ ಗೋತ್ರವೇನು ತಿಳಿಸು ಎಂದು ಕೇಳುತ್ತಾನೆ. ಅದಕ್ಕೆ ಜಾಬಾಲೆ; ನಾನು ಯೌವನದಲ್ಲಿ ಅನೇಕರೊಡನೆ ಕೂಡಿದ್ದೆ, ಹಲವರ ಸಹವಾಸವಿತ್ತು. ಹಾಗಾಗಿ ನಿರ್ದಿಷ್ಟವಾಗಿ ನಿನ್ನ ತಂದೆ ಯಾರೆಂದು ನಾನು ಹೇಳಲಾರೆ. ನೀನು ಸತ್ಯಕಾಮ, ನಿನ್ನ ತಾಯಿ ಜಾಬಾಲೆ. ಆದ್ದರಿಂದ ನೀನು ಸತ್ಯಕಾಮ ಜಾಬಾಲ, ಎಂದು ಹೇಳುತ್ತಾಳೆ. ಗೌತಮನ ಗುರುಕುಲಕ್ಕೆ ಬಂದ ಸತ್ಯಕಾಮ ತನ್ನ ತಾಯಿ ಹೇಳಿದ ವಿಷಯವನ್ನು ಹಾಗೆಯೆ ಒಪ್ಪಿಸುತ್ತಾನೆ. ಗೌತಮನು ಬ್ರಾಹ್ಮಣನಲ್ಲದವನಿಗೆ ಇಂತಹ ಸತ್ಯವನ್ನು ಹೇಳಲು ಅಸಾಧ್ಯ. ಆದ್ದರಿಂದ ನಿನ್ನನ್ನು ವಿದ್ಯಾರ್ಥಿಯಾಗಿ ಸ್ವೀಕರಿಸುತ್ತೇನೆ ಎಂದು ಅವನ ಶಿಷ್ಯತ್ವವನ್ನು ಒಪ್ಪಿಕೊಳ್ಳುತ್ತಾನೆ. ಭಾರತದ ಬಹುತ್ವಕ್ಕೆ ಇದೊಂದು ಒಳ್ಳೆಯ ಉದಾಹರಣೆ.

ಉಪನಿಷತ್ಕಾಲದಲ್ಲಿ ವಾಣಿಜ್ಯ ವಹಿವಾಟುಗಳು ಹೆಚ್ಚಾದವು. ಮಗಧದ ರಾಜಗೃಹ, ಕಾಶಿ ಮುಂತಾದವು ವ್ಯಾಪಾರಕೇಂದ್ರಗಳಾದವು. ಸಾಮಾಜಿಕ ಚಲನೆ ಉಂಟಾಯಿತು. ಆಗ ಕ್ಷತ್ರಿಯರ ಪ್ರಾಬಲ್ಯ ಹೆಚ್ಚಾಯಿತು. ಪರಿಣಾಮವಾಗಿ ಸಣ್ಣ ಸಣ್ಣ ಪ್ರಾಂತ್ಯಗಳು ಹುಟ್ಟಿಕೊಂಡವು. ಅವುಗಳನ್ನು ಮಹಾಜನಪದಗಳು ಅಥವಾ ಗಣಸಂಘಗಳು ಎಂದು ಕರೆಯಲಾಗುತ್ತಿತ್ತು. ಧನಿಕರೇ ಅವುಗಳ ಮುಖ್ಯಸ್ಥರಾಗಿರುತ್ತಿದ್ದರು, ಚಕ್ರಾಧಿಪತಿಗಳಲ್ಲ. ಅವರನ್ನು ರಾಜನ್ಯರು ಎಂದು ಕರೆಯುತ್ತಿದ್ದರು. ಬುದ್ಧ, ಮಹಾವೀರರು ಅದೇ ಕಾಲಕ್ಕೆ ತಮ್ಮ ಹೊಸ ಚಿಂತನೆಗಳನ್ನು ಬಿತ್ತುತ್ತಿದ್ದರು. ಜನರಿಗೆ ವೈಯಕ್ತಿಕ ಸ್ವಾತಂತ್ರ್ಯ ಲಭಿಸಿತು. ವೇದಗಳನ್ನು ಗೌರವಿಸುವುದು ಕಡಿಮೆಯಾಯಿತು. ಶೂದ್ರರು ಗಿಡಮರಗಳನ್ನು ಪೂಜಿಸುತ್ತಿದ್ದರು. ಉಪನಿಷತ್ ಎಂಬುದರ ಶಬ್ದಾರ್ಥ ಜೊತೆಗೆ ಕುಳಿತುಕೊಳ್ಳುವುದು (sitting together) ಎಂದಿದೆ. ವಿದ್ಯಾರ್ಥಿ ಗುರುವಿನ ಜೊತೆ ಕುಳಿತು ಸಂವಾದಿಸುವುದು. ಉಪನಿಷತ್ತುಗಳು ವೇದಗಳಿಗೆ ಭಿನ್ನವಾಗಿದ್ದರೂ ಪರ್ಯಾಯವಾಗಿ ಬರಲಿಲ್ಲ. ಒಂದರ್ಥದಲ್ಲಿ ಪೂರಕವಾದವು. ಯಾಕೆಂದರೆ ಅವುಗಳು ಸಹ ತಾತ್ವಿಕತೆಯಲ್ಲಿ ಮೇಲೆ ಹೇಳಿದಂತೆ ಒಂದಕ್ಕೊಂದು ಬೆಸಗೊಂಡಿರಲಿಲ್ಲ. ಹೀಗೆ ಬಹುತ್ವವು ಎಲ್ಲ ಕಾಲದಲ್ಲಿಯೂ ಜನಜೀವನದಲ್ಲಿ ವ್ಯಾಪಿಸಿಕೊಂಡಿತ್ತು.

ಏಕರೂಪೀ ಧಾರ್ಮಿಕ ಪರಿಕಲ್ಪನೆ ಭಾರತಕ್ಕೆ ಸೆಮೆಟಿಕ್ ಧರ್ಮಗಳ ಕೊಡುಗೆ. ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳಲ್ಲಿಯೂ ಅಭಿಪ್ರಾಯ ಭೇದವಿದೆ, ಧರ್ಮಗಳು ಕವಲೊಡೆದಿವೆ ಎಂಬುದನ್ನು ಮರೆಯಬಾರದು. ಹಿಂದೂ ವರ್ಣವ್ಯವಸ್ಥೆಯಲ್ಲಿ ಏಕರೂಪೀ ಆಚರಣೆಗಳಿಲ್ಲ. ದ್ವಿಜರು ಮತ್ತು ದ್ವಿಜರಲ್ಲದವರ ಜೀವನ ವಿಧಾನ ಒಬ್ಬರದು ಇನ್ನೊಬ್ಬರಿಗೆ ಪರಿಚಯವಿರುವುದಿಲ್ಲ. ಆದ್ದರಿಂದ ಬಹುತ್ವವೇ ಹಿಂದೂ ಧರ್ಮದ ಜೀವಾಳ. ಎಲ್ಲಾ ಆಚರಣೆಗಳು ಸಮಾನ ಎಂದು ಗೌರವಿಸಲ್ಪಟ್ಟರೆ, ಪರಸ್ಪರರು ಅನುಮಾನಿಸುವುದನ್ನು ನಿಲ್ಲಿಸಿದರೆ ಧರ್ಮಗಳ ಅಸ್ತಿತ್ವ ಸಹನೀಯವಾಗುತ್ತದೆ.

ಒಮ್ಮೆ ಪ್ರಸೇನಜಿತ ಮಹಾರಾಜನು ಬುದ್ಧನನ್ನು ಭೇಟಿಯಾಗಲು ತನ್ನ ಮಂತ್ರಿಯೊಂದಿಗೆ ಹೊರಟಿರುತ್ತಾನೆ. ರಾಜಬೀದಿಯಲ್ಲಿ ಒಂದು ಗಂಧದ ಅಂಗಡಿ ಸಿಗುತ್ತದೆ. ಮಾಲೀಕ ಸೋತ ಮುಖಹೊತ್ತು ಕುಳಿತಿರುತ್ತಾನೆ. ದೂರದಿಂದಲೇ ಅವನನ್ನು ನೋಡಿದ ರಾಜ, ಮಂತ್ರಿಯನ್ನುದ್ದೇಶಿಸಿ' ಯಾಕೋ ಅವನನ್ನು ನೋಡುತ್ತಿದ್ದರೆ ಕೊಲ್ಲಬೇಕು ಅನಿಸುತ್ತಿದೆಯಲ್ಲ' ಎಂದು ಹೇಳುತ್ತಾನೆ. ಮಂತ್ರಿಗೆ ಆಶ್ಚರ್ಯವಾಗುತ್ತದೆ. ಬುದ್ಧನ ದರ್ಶನ ಮಾಡಿ ಅರಮನೆಗೆ ಹಿಂದಿರುಗಿದಮೇಲೆ, ನಮ್ಮ ಮಹಾರಾಜರು ಹೀಗೆ ವಿನಾಕಾರಣ ಯಾರನ್ನೂ ಶಂಕಿಸಿದವರಲ್ಲ, ಶಿಕ್ಷಿಸಿದವರಲ್ಲ, ಯಾಕೆ ಹೀಗೆ ಹೇಳುತ್ತಿದ್ದಾರೆ ಎಂದು ಯೋಚಿಸತೊಡಗುತ್ತಾನೆ. ಕುತೂಹಲದಿಂದ ಮರುದಿನ ಆ ಗಂಧದ ಅಂಗಡಿಗೆ ಮಾರುವೇಷದಲ್ಲಿ ಭೇಟಿ ನೀಡಿ ಆ ಮಾಲೀಕನ ಕುಶಲೋಪರಿಯನ್ನು ವಿಚಾರಿಸುತ್ತಾನೆ. ಮಾಲೀಕನು ಅಷ್ಟೇ ಮುಗ್ಧತೆಯಿಂದ ನನಗೆ ವ್ಯಾಪಾರ ಇಲ್ಲವೆಂದೂ, ಈ ಗಂಧದ ಕೊರಡುಗಳನ್ನು ಯಾರೂ ಕೊಳ್ಳುವವರಿಲ್ಲದೆ ನಷ್ಟವಾಗಿದೆಯೆಂದೂ ಅದಕ್ಕಾಗಿ ಈ ಮಹಾರಾಜ ಯಾವಾಗ ಸಾಯುತ್ತಾನೆ ಎಂದು ಕಾಯುತ್ತಾ ಕುಳಿತಿದ್ದೇನೆಂದು ಹೇಳಿಬಿಡುತ್ತಾನೆ. ಮಂತ್ರಿಗೆ ಗಾಬರಿಯಾಗುತ್ತದೆ. ಹೊ! ಮಹಾರಾಜರಿಗೆ ಇವನನ್ನು ಕೊಲ್ಲಬೇಕು ಅನಿಸಿದ್ದು ಇದಕ್ಕೇ ಎಂದು ತಿಳಿಯುತ್ತದೆ. ತನಗಾಗಿ ಒಂದಷ್ಟು ಗಂಧದ ಕೊರಡುಗಳು ಬೇಕಾಗಿವೆ ಎಂದು ಕೊಳ್ಳುತ್ತಾನೆ. ಮಾಲೀಕನಿಗೆ ಸಂತೋಷವಾಗುತ್ತದೆ.

ಮತ್ತೆ ಮಹಾರಾಜನಲ್ಲಿಗೆ ಬಂದ ಮಂತ್ರಿ ನಿಮಗೆ ಕೊಲ್ಲಬೇಕು ಅನಿಸಿದ್ದ ಆ ಗಂಧದ ಅಂಗಡಿಯ ಮಾಲೀಕನನ್ನು ಭೇಟಿಮಾಡಿದೆ. ನಿಮ್ಮ ಮೇಲೆ ಅವನಿಗೆ ತುಂಬಾ ಅಭಿಮಾನವಿದೆ. ಅರಮನೆಯಿಂದ ಬಂದಿದ್ದೇನೆಂದು ತಿಳಿದು ನಿಮಗಾಗಿ ಈ ಗಂಧದ ಕೊರಡುಗಳನ್ನು ಉಡುಗೊರೆಯಾಗಿ ಕಳಿಸಿಕೊಟ್ಟಿದ್ದಾನೆ ಎಂದು ಹೇಳುತ್ತಾನೆ. ಆಗ ಮಹಾರಾಜನಿಗೆ ಪಶ್ಚಾತ್ತಾಪವಾಗುತ್ತದೆ. ಇಂತಹ ಒಳ್ಳೆಯ ವ್ಯಕ್ತಿಯನ್ನು ನಾನು ಸಂಶಯಿಸಿದೆನಲ್ಲ ಎಂದು ವ್ಯಥೆಪಡುತ್ತಾನೆ. ಅವನಿಗಾಗಿ ಉಡುಗೊರೆಯನ್ನು ಮಂತ್ರಿಯ ಮೂಲಕವೇ ಕಳಿಸಿಕೊಡುತ್ತಾನೆ. ಅರಮನೆಯಿಂದ ಬಂದ ಉಡುಗೊರೆಗಳನ್ನು ನೋಡಿ ಮಾಲೀಕನು ಅತೀವ ಸಂಕಟಕ್ಕೊಳಗಾಗುತ್ತಾನೆ. ಇಂಥ ಒಳ್ಳೆಯ ರಾಜನನ್ನು ನಾನು ಸ್ವಾರ್ಥಕ್ಕಾಗಿ ಸಾಯಲಿ ಎಂದು ಬಯಸಿದೆನಲ್ಲಾ ಎಂದು ಅವನಿಗೂ ದುಃಖವಾಗುತ್ತದೆ. ಮಂತ್ರಿಗೆ ಇಬ್ಬರ ಮನಸ್ಸನ್ನು ತಿಳಿಗೊಳಿಸಿದ ಸಂತೋಷ ಉಂಟಾಗುತ್ತದೆ. ನಮ್ಮೊಳಗಿನ ಅಪನಂಬಿಕೆಯೆ ನಮಗೆ ಶತ್ರು ಎಂಬುದೇ ಈ ಕಥೆಯ ಸಾರಾಂಶ. (ಈ ಅಂಕಣದಲ್ಲಿ ಮೂಡ್ನಾಕೂಡು ಚಿನ್ನಸ್ವಾಮಿಯವರ ಕೊನೆಯ ಲೇಖನ.)

■ **ಮೂಚಿ**

## ಮಾತೇ ಮುತ್ತು

★ ಸಾಮಾನ್ಯವಾಗಿ ಯಶಸ್ಸು, ಅದರ ಕಡೆಗೆ ಗಮನ ಹರಿಸಲೂ ಪುರುಸೊತ್ತು ಇಲ್ಲದ ಮನುಷ್ಯನಿಗೇ ಒಲಿಯುತ್ತದೆ.

-ಹೆನ್ರಿ ಡೇವಿಡ್ ಥೋರೊ

★ ಅವಕಾಶಗಳು ಎದುರಿಗೆ ಸಿಗುವುದಿಲ್ಲ, ನೀವು ಸೃಷ್ಟಿಸಿಕೊಳ್ಳಬೇಕು.

–ಕ್ರಿಸ್ ಗ್ರಾಸರ್

★ ಹೆಚ್ಚು ಕಷ್ಟಪಟ್ಟು ದುಡಿದಷ್ಟೂ ಹೆಚ್ಚು ಅದೃಷ್ಟ ಅರಸಿ ಬರುತ್ತದೆ.

-ಥಾಮಸ್ ಜಫರ್ಸನ್

★ ಏಳು ಸಲ ಬಿದ್ದರೂ ಪರವಾಗಿಲ್ಲ, ಎಂಟನೇ ಸಲ ಎದ್ದು ನಿಲ್ಲು.

-ಜಪಾನಿ ಗಾದೆ

★ ಒಳ್ಳೆಯ ಮನುಷ್ಯ ಒಡೆಯನಾಗುವುದಿಲ್ಲ; ಒಡೆಯ ಒಳ್ಳೆಯ ಮನುಷ್ಯನಾಗುವುದಿಲ್ಲ.

-ಡಾ. ಬಿ.ಆರ್.ಅಂಬೇಡ್ಕರ್

★ ಶಬ್ದಗಳು ಅತ್ಯಂತ ಅಗ್ಗ. ಅತ್ಯಂತ ದೊಡ್ಡ ವಸ್ತುವನ್ನೂ ನೀವು ಆನೆ ಎಂದು ಕರೆಯಬಹುದು.

-ಚಾರ್ಲಿ ಚಾಪ್ಲಿನ್

★ ನಿನ್ನಲ್ಲಿ ಹರಿಯುವ ನದಿಯೇ ನನ್ನಲ್ಲೂ ಹರಿಯುತ್ತಿದೆ.

-ಸಂತ ಕಬೀರ